# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅಂಕೋಲಾ

**ಸಿಸಿ ನಂಬರ 337/2025**

ಆರೋಪಿಯ ಹೆಸರುಃ ಶಬ್ಬೀರ ಅಹಮ್ಮದ ಸೈಯದ

ವಯಸ್ಸುಃ 50

ಉದ್ಯೋಗ ಮೆಕ್ಯಾನಿಕಲ್

ವಿಳಾಸಃ ಸಾಃ ಹುಲಿದೇವರವಾಡಾ, ಶೆಡಗೇರಿ, ತಾಃ ಅಂಕೋಲಾ

## ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ.351 ರೀತ್ಯಾ ಆರೋಪಿಯ ಹೇಳಿಕೆ

ಪ್ರ 1: ನೀನು ಅಭಿಯೋಜನೆಯ ಪರ ಹಾಜರುಪಡಿಸಿರುವ ಸಾಕ್ಷಿಗಳ ಹೇಳಿಕೆ ಕೇಳಿದ್ದಿಯಾ?

ಉತ್ತರಃ

ಪ್ರ 2: ಫಿರ್ಯಾದಿ ಜನತಾ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ರಥಬೀದಿ, ಭಟ್ಕಳ, ಶಾಃ ಅಂಕೋಲಾ ಇದರ ವ್ಯವಸ್ಥಾಪಕರಾದ ಪಿಡಬ್ಲ್ಯೂ 1 : ಶ್ರೀ ನಿತ್ಯಾನಂದ ತಿಮ್ಮಣ್ಣ ನಾಯಕ, ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕಃ 27-12-2022 ರಂದು ಆರೋಪಿ ಫಿರ್ಯಾದಿದಾರರ ಸೊಸೈಟಿಯಿಂದ ರೂ.75,000/- ಸಾಲವನ್ನು ಪಡೆದಿದ್ದು ಇರುತ್ತದೆ. ಆರೋಪಿ ವ, ಜಾಮಿನಾನುದಾರರು ಒಪ್ಪಿ ಎಲ್ಲಾ ಸಾಲ ಪತ್ರಗಳಿಗೆ ಮತ್ತು ಕರಾರಿಗೆ ಮತ್ತು ಜಾಮೀನು ಪತ್ರಕ್ಕೆ ಸಹಿ ಮಾಡಿಕೊಟ್ಟಿದ್ದು, ಸದರಿ ಸಾಲದ ಕರಾರುಗಳ ಪ್ರಕಾರ ಆರೋಪಿ ವ, ಜಾಮಿನಾನುದಾರರು ಸಾಲದ ಹಣವನ್ನು ಮರುಪಾವತಿ ಮಾಡಿಸುವಷ್ಟು ಹಣ ಇದೆ ಎಂದು ನಂಬಿಸಿ ರೂ. 85,341/- ಹಣ ತುಂಬುವುದು ಬಾಕಿ ಇದ್ದಾಗ, ಆರೋಪಿತನು ದಿನಾಂಕಃ 26-12-2024 ರಂದು ತಾನು ಕೆನರಾ ಬ್ಯಾಂಕ್, ಶಾಖೆಃ ಅಂಕೋಲಾ ರವರಲ್ಲಿ ಹಣದ ಉಳಿತಾಯ ಖಾತೆ ಅಡಿಯಲ್ಲಿ ಚೆಕ್ ನಂಬರ 182912 ನ್ನು

ರೂ. 85,341/- ಕ್ಕೆ ನೀಡಿರುತ್ತಾನೆ. ಸದರಿ ಆರೋಪಿ ನೀಡಿದ ಚೆಕ್ಕು ಲಿ **“Drawers Signature Differ”** ಎಂದು ಹಿಂಬರಹದೊಂದಿಗೆ ಪರತ್ ಬಂದಿರುತ್ತದೆ. ಈ ಕುರಿತಾಗಿ ಆರೋಪಿತನಿಗೆ ಮುಂಚಿತವಾಗಿ ನೋಟೀಸು ನೀಡಿದರೂ ಸಹ ಹಣ ಮರು ಪಾವತಿಸದೇ ಎನ್ ಐ ಆ್ಯಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ 3: ಈ ಪ್ರಕರಣದಲ್ಲಿ ಮತ್ತೇನಾದರೂ ಹೇಳುವುದಿದೆಯಾ?

ಉತ್ತರಃ

ಪ್ರ 4: ನಿಮ್ಮ ಪರವಾಗಿ ಸಾಕ್ಷಿ ಮಾಡಿಸುತ್ತೀರಾ ಹಾಗೂ ಏನಾದರೂ ಕಾಗದ ಪತ್ರವನ್ನು ಹಾಜರುಪಡಿಸುತ್ತೀರಾ ?

ಉತ್ತರಃ

( ಆರೋಪಿಗೆ ಮೇಲಿನ ಪ್ರಶ್ನೆಗಳನ್ನು ಆತನಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಲಾಗಿ ಅವರು ಕೊಟ್ಟಿರುವ ಉತ್ತರವನ್ನೇ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು.)

Sd/-

ದಿನಾಂಕಃ 11-11-2025.

**( ಅರ್ಪಿತಾ ಬಿ. ಬೆಲ್ಲದ)**

**ಪ್ರಭಾರ ಹೆ. ಪ್ರ. ದ. ನ್ಯಾದಂ, ಅಂಕೋಲಾ.**